ದಿನಾಂಕ 13.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ.ಎಂ.ಕೆ.., ವಕೀಲರಿಂದಃ**

4. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿಗಳು ನಮ್ಮ ಊರಿನವರೇ ಎಂದರೆ ಸರಿ. ನಾನು ಮತ್ತು ಆರೋಪಿಗಳು ರಾಜಕೀಯವಾಗಿ ಜೊತೆಯಲ್ಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ಪ್ರಾಸಾ 2 ಈಗಲೂ ಸಹ ಜೊತೆಯಲ್ಲಿ ರಾಜಕೀಯ ಕೆಲಸ ಮಾಡುತ್ತೇವೆ ಎಂದರೆ ಸರಿಯಲ್ಲ. ಪ್ರಾಸಾ 2 ರಾಜೇಗೌಡ ಈಗ ಗ್ರಾಮ ಪಂಚಾಯಿತಿ ಸದಸ್ಯರಾಗಿರುತ್ತಾರೆ.

5. ದಿನಾಂಕ 22.03.2023 ರಂದು ಹಬ್ಬದ ಗಲಾಟೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವಯಂ ಹೇಳುತ್ತಾರೆ ಹಬ್ಬದ ಸಂಭ್ರಮವಿತ್ತು. ಹಬ್ಬದ ಪ್ರಯಕ್ತ ಎಲ್ಲರೂ ಮಾರಮ್ಮನ ದೇವಸ್ಥಾನದ ಬಳಿ ಸೇರಿದ್ದೆವು ಎಂದರೆ ಸರಿಯಲ್ಲ. ಸಂಜೆ 6.30 ರ ಸಮಯದಲ್ಲಿ ನನ್ನನ್ನು ರಾಜೇಗೌಡ ದೇವಸ್ಥಾನದ ಬಳಿ ಕರೆಸಿಕೊಂಡರು. ಆ ಸಮಯದಲ್ಲಿ ಪಂಚಾಯಿತಿ ಮೆಂಬರ್ ಮತ್ತು ನಾನು ಇದ್ದೆವು ಎಂದರೆ ಸರಿ. ನಮ್ಮ ಊರಿನಲ್ಲಿ ಒಬ್ಬರೇ ಪಂಚಾಯಿತಿ ಮೆಂಬರ್ ಇದ್ದಾರೆ. ನರೇಗಾ ರಸ್ತೆಯನ್ನು ನಕಾಶೆಯ ರಸ್ತೆಯಲ್ಲಿ ಮಾಡಲು ತಿಳಿಸಲಾಗಿದೆ. ಅಕ್ರಮವಾಗಿ ಸರ್ವೇ ನಂ.98/7 ರಲ್ಲಿ ರಸ್ತೆ ನಿರ್ಮಾಣ ಮಾಡಿದ್ದೇವೆ ಎಂದರೆ ಸರಿಯಲ್ಲ. ತಮ್ಮ ಜಮೀನಿನಲ್ಲಿ ಅಕ್ರಮವಾಗಿ ರಸ್ತೆ ನಿರ್ಮಿಸಿರುವುದನ್ನು ರಾಜೇಗೌಡನ ಬಳಿ ಕೇಳಲು ಆರೋಪಿಗಳು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ.

6. ಕಾಲಿನಿಂದ ಒದ್ದು ತುಳಿದ ಸಲುವಾಗಿ ನನಗೆ ಒಳನೋವು ಆಗಿರುತ್ತದೆ. ರಿಯಲ್ ಮಿ ಎಕ್ಸ್ ಫೋನ್ ನ್ನು ಕಿತ್ತು ಹೊಡೆದು ಹಾಕಿರುತ್ತಾರೆ. ಆರೋಪಿಗಳು ನೇರವಾಗಿ ನನ್ನನ್ನೇ ಬಂದು ಕೇಳಿ ನನ್ನ ಮೊಬೈಲ್ ನ್ನು ಕಿತ್ತುಕೊಂಡಿರುತ್ತಾರೆ. ನಿಮಗೆ 22.03.2023 ರಂದೇ ದೂರು ಕೊಡಲು ಏನಾದರೂ ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಆಸ್ಪತ್ರೆಗೆ

ಹೋಗಿ ಬಂದು ಕೊಡಲು ಅಂದು ಯುಗಾದಿ ಹಬ್ಬ ಆಗಿದ್ದ ಕಾರಣ ಸ್ವಲ್ಪ ವಿಳಂಬವಾಗಿತ್ತು, ಆ ಕಾರಣ ಮಾರನೇ ದಿನ ದೂರು ಕೊಟ್ಟೆ ಎಂದು ಉತ್ತರಿಸಿರುತ್ತಾರೆ.

7. ರಾಮಶೆಟ್ಟಿಯವರು ಆರೋಪಿ ಶಿವರಾಜು ರವರ ಜಮೀನಿನ ಮೇಲೇ ಕೇಸು ಮಾಡಿರುತ್ತಾರೆ. ನಾವು ರಾಮಶೆಟ್ಟಿಯೊಂದಿಗೆ ಸೇರಿಕೊಂಡು ಉದ್ದೇಶ ಪೂರ್ವಕವಾಗಿ ಆರೋಪಿಗಳ ವಿರುದ್ಧ ದಾವಾ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳು ಕೊಟ್ಟಂತಹ ದೂರಿನನ್ವಯ ನನ್ನ ಮತ್ತು ರಾಜೇಗೌಡರ ವಿರುದ್ಧ ಸಿಸಿ 828/2023 ಕನಕಪುರ ನ್ಯಾಯಾಲಯದಲ್ಲಿ ಇದೆ ಎಂದರೆ ಸರಿ. ನಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿರುವ ಕಾರಣ ಅದನ್ನು ದುರುಪಯೋಗ ಪಡಿಸಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ಇದ್ದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿ ಅವರಿಗೆ ಊರಿನಲ್ಲಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ದೂರಿನಲ್ಲಿ ಸುಳ್ಳು ವಿಚಾರಗಳನ್ನು ಸೃಷ್ಟನೆ ಮಾಡಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆಮಾಲು 1 ರಿಂದ 3 ನ್ನು ಈ ಪ್ರಕರಣಕ್ಕಾಗಿ ಸೃಷ್ಟನೆ ಮಾಡಲಾಗಿದೆ ಎಂದರೆ ಸರಿಯಲ್ಲ. 2ನೇ ಆರೋಪಿ ವಿದ್ಯಾರ್ಥಿ ಆಗಿದ್ದರೂ ಸಹ ಆತನಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ಆತನ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ರಾಜೇಗೌಡ ಪಂಚಾಯಿತಿ ಸದಸ್ಯನಾಗಿರುವ ಕಾರಣ ಆತ ಹೇಳಿದಂತೆ ಕೇಳಿ ಆರೋಪಿಗಳಿಗೆ ತೊಂದರೆ ಕೊಡಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ನರೇಗಾ ರಸ್ತೆ ಮಾಡಲು ಕೊಟ್ಟಂತಹ ಜಾಗವೇ ಬೇರೆ ಇದ್ದು, ನಾವು ಆರೋಪಿಗಳ ಜಾಗದಲ್ಲಿ ಸದರಿ ರಸ್ತೆಯನ್ನು ನಿರ್ಮಿಸಿದ್ದು ಅದನ್ನು ಆರೋಪಿಗಳು ಕೇಳಿದ್ದ ಕಾರಣದಿಂದಲೇ ಅವರ ಮೇಲೆ ಸುಳ್ಳು ಆಪಾದನೆ ಯನ್ನು ಮಾಡಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಕೊಡಿಹಳ್ಳಿ ತಟ್ಟೆಗುಪ್ಪೆ ಸರ್ವೇ ನಂ.98/7 1ನೇ ಆರೋಪಿಯ ಕುಟುಂಬದ ಜಮೀನಾಗಿದ್ದು, ಸದರಿ ಜಮೀನಿನಲ್ಲಿ ನಾವು ಅಕ್ರಮವಾಗಿ ರಸ್ತೆ ನಿರ್ಮಿಸಿರುತ್ತೇನೆ ಎಂದರೆ

ಸರಿಯಲ್ಲ. ಈಗ ನನಗೆ ತೋರಿಸಿದ 6 ಫೋಟೋಗಳು ಆರೋಪಿಗಳಿಗೆ ಸೇರಿದ ಜಮಿನಿನ ಫೋಟೋ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸಿರುತ್ತಾರೆ. ಆರೋಪಿಗಳ ಕುಟುಂಬಕ್ಕೆ ಸೇರಿದ ಜಮೀನು ಎತ್ತರ ಭಾಗದಲ್ಲಿರುವ ಜಮೀನು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನರೇಗಾ ರಸ್ತೆ ಮಾಡಲು ಗೊತ್ತು ಮಾಡಿದಂತಹ ಜಾಗ ತಗ್ಗಿನಲ್ಲಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಸರ್ವೆ ನಕ್ಷೆ ಮಾಡಲಾಗಿದೆ ಎಂದು ಉತ್ತರಿಸಿರುತ್ತಾರೆ. ಆರೋಪಿಗಳಿಗೆ ಮತ್ತು ಅವರ ಕುಟುಂಬದವರಿಗೆ ಯಾವುದೇ ನೋಟೀಸ್ನ್ನು ಪಂಚಾಯಿತಿಯಿಂದ ನೀಡದೇ ನಾನು ಮತ್ತು ಪ್ರಾಸಾ 2 ಸೇರಿಕೊಂಡು ಅವರ ಖಾಸಗಿ ಜಾಗದಲ್ಲಿ ರಸ್ತೆ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅವರ ವೈಯಕ್ತಿಕ ಜಾಗದಲ್ಲಿ ರಸ್ತೆ ನಿರ್ಮಾಣ ಮಾಡಿದ್ದ ಕಾರಣ ಅದನ್ನು ತೆರವು ಮಾಡಿಕೊಡಲು ಕೇಳಿರುವ ಕಾರಣ ಈ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ, ಆರೋಪಿಗಳ್ಯಾರು ನನ್ನನ್ನು ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುವುದಿಲ್ಲ, ಯಾವುದೇ ರೀತಿಯ ಹೊಡೆದಾಟ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ರಾಜೇಗೌಡ ಒಂದೇ ಜಾತಿಯವರು ಎಂದರೆ ಸರಿ. ಆ ಕಾರಣ ರಾಜೇಗೌಡನ ಮಾತು ಕೇಳಿ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**